REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 | ಸಂಚಿಕೆ : 34 | ನವೆಂಬರ್ 30, 2022 | ಬುಧವಾರ | ಪುಟಗಳು : 8 | ಬೆಲೆ : 2/-

## ಸೌಭಾಗ್ಯ ಮಹಿಳಾ ಸಹಕಾರಿ ಬ್ಯಾಂಕಿನ ರಜತ ಮಹೋತ್ಸವ

## ಬ್ಯಾಂಕು ಮಹಿಳಾ ಸಬಲೀಕರಣಕ್ಕೆ ಶ್ರಮಿಸಲಿ : ಮೀನಾಕ್ಷಿ ಗಡ




**ಗದಗ :** ಗದಗದ ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕಿನ 25ನೇ ವರ್ಷದ ರಜತ ಮಹೋತ್ಸವ ಸಮಾರಂಭದ ಉದ್ಘಾಟನೆಯನ್ನು ಬೆಂಗಳೂರಿನ ಭಾರತೀಯ ರಿಜರ್ವ್ ಬ್ಯಾಂಕಿನ ಮೇಲುಸ್ತುವಾರಿ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ರವರು ನೆರವೇರಿಸಿ, ಮಾತನಾಡಿ ಮಹಿಳೆಯರೇ ಸೇರಿಕೊಂಡು ಬ್ಯಾಂಕ್ ಆರಂಭಿಸಿ, ಇದೀಗ ಅದು 25 ವರ್ಷಗಳನ್ನು ಪೂರೈಸಿ ರಜತ ಮಹೋತ್ಸವ ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ರಾಜ್ಯದಲ್ಲಿ ಸುಮಾರು 22 ಮಹಿಳಾ ಸಹಕಾರ ಬ್ಯಾಂಕುಗಳು ಆರ್‌ಬಿಐ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಹಲವು ಬ್ಯಾಂಕುಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಒಗ್ಗಟ್ಟಾಗಿ ನಿರಂತರವಾದ ಪರಿಶ್ರಮದಿಂದ ಕಾರ್ಯನಿರ್ವಹಿಸಿದರೆ ಅದಕ್ಕೆ ಸಮಾಜವು ಸ್ಪಂದಿಸಿದರೆ ಬ್ಯಾಂಕಿನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು ಬ್ಯಾಂಕಿನ ಅಭಿವೃದ್ಧಿ ಜೊತೆಗೆ ಸಮಾಜಮುಖಿ ರಚನಾತ್ಮಕ ಕಾರ್ಯಗಳನ್ನು ಮಾಡುವ ಚಿಂತನೆ ಅಳವಡಿಸಿಕೊಂಡರೆ ಪ್ರಗತಿ ಸಾಧಿಸಲು ಸಾಧ್ಯ. ಅದಕ್ಕೆ ಗದುಗಿನ ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕ್ ಸಾಕ್ಷಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಗದಗ ತೋಂಟದಾರ್ಯ ಸಂಸ್ಥಾನಮಠದ ಜಗದ್ಗುರು ಸಿದ್ಧರಾಮ ಮಹಾಸ್ವಾಮಿಗಳು ಮಾತನಾಡಿ ಮಹಿಳೆಯರಲ್ಲಿ ಒಗ್ಗಟ್ಟು ಹಾಗೂ ಸಮಾನ ಮನಸ್ಥಿತಿ ನಿರ್ಮಾಣಗೊಂಡು ಸಮಾಜಕ್ಕೆ ಕೊಡುಗೆ ನೀಡುವ ಹಂಬಲವಿದ್ದರೆ ಅದ್ಭುತವಾದ ಬದಲಾವಣೆ ತರಲು ಸಾಧ್ಯ ಎಂಬುದಕ್ಕೆ 25 ವರ್ಷಗಳ ಹಿಂದೆ ನಗರದಲ್ಲಿ ಆರಂಭಗೊಂಡ ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕ ಸಾಕ್ಷಿ ಎಂದು ಅಭಿಪ್ರಾಯಪಟ್ಟರು. 25ಲಕ್ಷದಿಂದ ಆರಂಭಗೊಂಡ ಈ ಬ್ಯಾಂಕು ಇಂದು 98ಲಕ್ಷ ಷೇರನ್ನು ಹೊಂದಿದೆ. 25 ಕೋಟಿ ಠೇವಣಿಯನ್ನು ಸಂಗ್ರಹಿಸಿದೆ ಎನ್ನುವುದು ಸಾಮಾನ್ಯ ಸಂಗತಿ ಅಲ್ಲ. ಬ್ಯಾಂಕು ಸಮಾಜ ಮುಖಿ ಕೆಲಸಗಳನ್ನು ಸಹ ಮಾಡಲು ಸಾಧ್ಯ ಎಂಬುದನ್ನು ತೋರಿಸಿರುವ ಸೌಭಾಗ್ಯ ಮಹಿಳಾ ಬ್ಯಾಂಕ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಹೊಲಿಗೆ ಯಂತ್ರಗಳ ವಿತರಣೆ, ತರಕಾರಿ ಹಾಗೂ ಹಣ್ಣು ವ್ಯಾಪಾರ ಮಾಡುವವರಿಗೆ ಛತ್ರಿ ಹಾಗೂ ತೂಕದ ಯಂತ್ರ ವಿತರಣೆ, ಉಚಿತ ಆರೋಗ್ಯ ತಪಾಸಣೆ ಶಿಬಿರ, ಬೀದಿ ಬದಿ ಹೋಟೆಲ್ ವ್ಯಾಪಾರ ಮಾಡುವ ಮಹಿಳೆಯರಿಗೆ ಟೇಬಲ್, ಕುರ್ಚಿ ವಿತರಿಸಿದೆ. ವಿದ್ಯಾರ್ಥಿನಿಯರಿಗೆ ಸಹಾಯಧನ ನೀಡಿದ್ದು, ಮಹಿಳಾ ಪತ್ರಿಕೋದ್ಯಮಿಗಳಿಗೆ ಹಾಗೂ ಮಹಿಳಾ ಕೈಗಾರಿಕೋದ್ಯಮಿಗಳಿಗೆ ಸನ್ಮಾನಿಸಿ ಪ್ರೋತ್ಸಾಹ ನೀಡಿದೆ. ಮಹಿಳೆಯರಿಗೆ ಆರೋಗ್ಯದ ಕುರಿತು ತಿಳುವಳಿಕೆ ನೀಡಿದ್ದು ಸೇರಿದಂತೆ ಹಲವಾರು ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ಸಮಾಜಕ್ಕೆ ತನ್ನದೇ ಆದ ಕೊಡುಗೆ ನೀಡಿದೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಎಸ್.ವ್ಹಿ. ಸಂಕನೂರ ಮಾತನಾಡಿ, ಸರ್ಕಾರದಲ್ಲಿ ಮಹಿಳೆಯರಿಗೆ ಹಲವಾರು ಅವಕಾಶಗಳಿದ್ದು, ಸ್ತ್ರೀ ಸಂಘ ಬಲವರ್ಧನೆಗಾಗಿ ಮುದ್ರಾ ಯೋಜನೆ ಸೇರಿದಂತೆ ಹಲವಾರು ಯೋಜನೆಗಳು ಇವೆ. ಮಹಿಳೆಯರು

3ನೇ ಪುಟಕ್ಕೆ...

ಕರ್ನಾಟಕಕ್ಕೆ ರೂ. 1,915 ಕೋಟಿ ಜಿಎಸ್‌ಟಿ ಪರಿಹಾರ 2

ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ಹಿರಿಯರಿಗೆ ಗೌರವ ಸಮರ್ಪಣೆ; ಗ್ರಾಹಕರ ವಿಶ್ವಾಸದಿಂದ ಸಹಕಾರ ಕ್ಷೇತ್ರ ಗಟ್ಟಿ 4

ನಿಮ್ಮ ಪ್ರಶ್ನೆ ನಮ್ಮ ಉತ್ತರ 7



## ಅತ್ಮೀಯ ಸಹಕಾರಿಗಳೇ...

### ಆರ್ಥಿಕ ಸ್ಥಿತಿ ಸುಧಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ

ಕಳೆದ ಆರ್ಥಿಕ ವರ್ಷವೊಂದರಲ್ಲೇ, ಸಾರ್ವಜನಿಕ ಸ್ವಾಮ್ಯದ ಹನ್ನೆರಡು ಬ್ಯಾಂಕುಗಳಲ್ಲಿ ನಲವತ್ತು ಸಾವಿರ ಕೋಟಿ ರೂಪಾಯಿಗೂ ಅಧಿಕ ಮೊತ್ತದ ವಂಚನೆಯಾಗಿದೆ ಎಂದು ಆರ್‌ಟಿಐ ಅಡಿಯಲ್ಲಿ ಕೇಳಿದ್ದ ಪ್ರಶ್ನೆಗೆ ರಿಸರ್ವ್ ಬ್ಯಾಂಕ್ ತಿಳಿಸಿದೆ. ಇದರರ್ಥ ವಂಚನೆ ತಡೆಗೆ ಆರ್‌ಬಿಐ ನಡೆಸುತ್ತಿರುವ ಪ್ರಯತ್ನಗಳು ವಿಫಲವಾಗುತ್ತಿವೆ ಎಂದಾಗುತ್ತದೆಯಲ್ಲವೇ? ಸಾರ್ವಜನಿಕ ಸ್ವಾಮ್ಯದ ಬ್ಯಾಂಕುಗಳು ಬೃಹತ್ ಉದ್ಯಮಿಗಳಿಗೆ ನೀಡಿರುವ ಸಾಲ ವಸೂಲಾತಿಗೆ ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ, ಬದಲಿಗೆ ತೋರಿಕೆಯ ಸಾಲ ವಸೂಲಾತಿಯಲ್ಲಿ ತೊಡಗಿವೆ ಎನ್ನುವ ಬ್ಯಾಂಕ್ ಗ್ರಾಹಕರ ಆರೋಪದಲ್ಲಿ ಸತ್ಯವಿದೆ ಎಂದೆನ್ನಿಸುತ್ತಿದೆ.

ಇರಲಿ, "ಕೆಟ್ಟ ಸಾಲ ವಸೂಲಾತಿಗೆ ಕಾನೂನಿನಡಿಯಲ್ಲಿ ಗರಿಷ್ಠ ಆದ್ಯತೆ ನೀಡುವುದಾಗಿಯೂ, ಕೆಟ್ಟ ಸಾಲದ ಖಾತೆಗಳಿಂದ ದೇಶದ ಬ್ಯಾಂಕಿಂಗ್ ಆರ್ಥಿಕತೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ಕೇವಲ ಕೆಲವೇ ಖಾತೆಗಳಿಂದ ಈ ಸಮಸ್ಯೆಯಾಗಿದೆ. ಆದಷ್ಟು ಶೀಘ್ರ ಸೂಕ್ತ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು" ಎಂದು ಅಂದಿನ ಅರ್ಥ ಸಚಿವ ಅರುಣ್ ಜೈಟ್ಲಿ ಅವರು ಲೋಕಸಭೆಯಲ್ಲಿ ಹೇಳಿ ವರ್ಷಗಳೇ ಕಳೆದಿವೆ.

ಕಳೆದ ಕೆಲವು ವರ್ಷಗಳಲ್ಲಿ ಸಾರ್ವಜನಿಕ ಬ್ಯಾಂಕುಗಳು ಹೀಗೆ ವಸೂಲಾಗದೆ ಕೈಬಿಟ್ಟಿರುವ ಸಾಲದ ಮೊತ್ತವೇ ಏಳು ಲಕ್ಷ ಕೋಟಿ ರೂಪಾಯಿಗೂ ಅಧಿಕ ಎಂದು ಆರ್‌ಬಿಐ ಕೆಲ ತಿಂಗಳ ಹಿಂದೆಯೇ ಅಧಿಕೃತವಾಗಿಯೇ ಒಪ್ಪಿಕೊಂಡಿದೆ. ಆದರೂ ಭಾರಿ ಕುಳಗಳಿಗೆ ಅಧಿಕ ಮೊತ್ತದ ಸಾಲಗಳನ್ನು ಕೊಟ್ಟು ಬ್ಯಾಂಕುಗಳು ಬರಿದಾಗುತ್ತಿವೆ. ನಮ್ಮ ಬ್ಯಾಂಕಿಂಗ್ ವಲಯ ತೀವ್ರ ನಷ್ಟಕ್ಕೀಡಾಗುತ್ತಿರುವುದಕ್ಕೆ ಅವುಗಳ ಆದಾಯದಲ್ಲಿ ಕುಸಿತ ಉಂಟಾಗಿರುವುದಕ್ಕೆ ವಹಿವಾಟಿನ ಹಿಂಜರಿತವಾಗಲಿ ಕಾರಣವಲ್ಲ, ಬದಲಿಗೆ ವಸೂಲಾಗದ ಸಾಲಗಳ ನಿರ್ವಹಣೆಗಾಗಿ ತನ್ನ ಲಾಭಾಂಶದಲ್ಲಿ ಭಾರಿ ಮೊತ್ತವನ್ನು ಪ್ರತ್ಯೇಕವಾಗಿ ಮೀಸಲಿಡುತ್ತಿರುವುದರಿಂದ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

ದೇಶದ ಆರ್ಥಿಕ ವ್ಯವಸ್ಥೆಗೆ ಹಾಗೂ ಬ್ಯಾಂಕಿಂಗ್ ವಲಯ ಹೀಗೆ ಹದಗೆಡಲು ವಂಚನೆಗಳು ಮಾತ್ರ ಕಾರಣವಲ್ಲ ಸ್ವತ ಸರ್ಕಾರದ ತಪ್ಪು ಆರ್ಥಿಕ ನೀತಿಗಳು ಕಾರಣವಾಗಿವೆ. 2016ರ ನವೆಂಬರ್ 8ರಂದು ನೋಟು ಅಮಾನ್ಯಿಕರಣ ಮಾಡಿದ್ದು ಒಂದಾದರೆ, ಇನ್ನೊಂದು ಯಾವುದೇ ಸೂಕ್ತ ತಯಾರಿ ಇಲ್ಲದೆ ಜಾರಿಯಾದ ಜಿ.ಎಸ್.ಟಿ. ತೆರಿಗೆ ವ್ಯವಸ್ಥೆ. ಇದು ನಮ್ಮ ದೇಶದ ಆರ್ಥಿಕತೆಗೆ ಹಾಗೂ ಬ್ಯಾಂಕಿಂಗ್ ವಲಯಕ್ಕೆ ಬಾರೀ ಹೊಡೆತ ಕೊಟ್ಟಿತು ಎಂದು ಮತ್ತೊಮ್ಮೆ ಹೇಳದೆ ವಿಧಿ ಇಲ್ಲ.

ಈ ಎರಡು ಮಹಾ ಯೋಜನೆಗಳು ಕೊಟ್ಟ ಹೊಡೆತದಿಂದ ನಮ್ಮ ಸಾರ್ವಜನಿಕ ಬ್ಯಾಂಕುಗಳಿಗೆ ಉಂಟಾದ ನಷ್ಟವೇ ಹತ್ತು ಲಕ್ಷ ಕೋಟಿ ರೂಪಾಯಿಗೂ ಅಧಿಕ ಎನ್ನುವುದನ್ನು ಅಂಕಿ-ಅಂಶಗಳೇ ಹೇಳುತ್ತಿವೆ. ಈ ನಷ್ಟದ ಖಾತೆಗಳ ನಿರ್ವಹಣೆಗಾಗಿ ಬ್ಯಾಂಕುಗಳು ಮಾಡುತ್ತಿರುವ ವೆಚ್ಚವೇ ರೂ. 32,400 ಕೋಟಿ ರೂಗಳಿಗೂ ಅಧಿಕ ಎನ್ನುವುದು ಆರ್ಥಿಕ ತಜ್ಞರ ಅಂದಾಜಾಗಿದೆ.

ಮುಂದಿನ ದಿನಗಳಲ್ಲಿ ಆರ್ಥಿಕ ಹಿಂಜರಿತದ ಕೆಟ್ಟ ಪರಿಣಾಮಗಳು ದೇಶದ ಜನರ ಮೇಲೆ ಆಗಲಿರುವುದನ್ನು ಅರಿತು ದೇಶದ ಅರ್ಥ ವ್ಯವಸ್ಥೆಗೆ ಆಗಿರುವ ಹಾನಿ ನಿವಾರಣೆಗೆ ಕೇಂದ್ರ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ ಎಂದು ಹೇಳ ಬಯಸುತ್ತೇನೆ.

**ಎಚ್.ಕೆ. ಪಾಟೀಲ**
ಅಧ್ಯಕ್ಷರು

## ಕರ್ನಾಟಕಕ್ಕೆ ರೂ. 1,915 ಕೋಟಿ ಜಿಎಸ್‌ಟಿ ಪರಿಹಾರ

**ನವದೆಹಲಿ** : ಕೇಂದ್ರ ಹಣಕಾಸು ಸಚಿವಾಲಯವು ಜಿಎಸ್‌ಟಿ ಪರಿಹಾರ ರೂಪದಲ್ಲಿ ಕರ್ನಾಟಕ ಸರ್ಕಾರಕ್ಕೆ ರೂ. 1,915 ಕೋಟಿಯನ್ನು ಬಿಡುಗಡೆ ಮಾಡಿದೆ. ವಿವಿಧ ರಾಜ್ಯಗಳಿಗೆ ಬಿಡುಗಡೆ ಮಾಡಿರುವ ಒಟ್ಟು ಮೊತ್ತ ರೂ. 17 ಸಾವಿರ ಕೋಟಿ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಜುಲೈ 1, 2017 ರಿಂದ ಜಾರಿಗೆ ಬರುವಂತೆ ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪರಿಚಯಿಸಲಾಯಿತು ಮತ್ತು ಐದು ವರ್ಷಗಳ ಅವಧಿಗೆ ಜಿಎಸ್‌ಟಿ ಅನುಷ್ಠಾನದ ಖಾತೆಯಲ್ಲಿ ಉಂಟಾಗುವ ಯಾವುದೇ ಆದಾಯದ ನಷ್ಟಕ್ಕೆ ಪರಿಹಾರದ ಭರವಸೆಯನ್ನು ರಾಜ್ಯಗಳಿಗೆ ಭರವಸೆ ನೀಡಲಾಗಿತ್ತು. ರಾಜ್ಯಗಳಿಗೆ ಪರಿಹಾರವನ್ನು ಒದಗಿಸಲು ಕೆಲವು ಸರಕುಗಳ ಮೇಲೆ ಸೆಸ್ ವಿಧಿಸಲಾಗುತ್ತದೆ ಮತ್ತು ಸಂಗ್ರಹಿಸಿದ ಸೆಸ್ ಮೊತ್ತವನ್ನು ಪರಿಹಾರ ನಿಧಿಗೆ ಜಮಾ ಮಾಡಲಾಗುತ್ತದೆ.

2022 ಅಕ್ಟೋಬರ್ ವರೆಗಿನ ಒಟ್ಟು ಸೆಸ್ ಸಂಗ್ರಹವು ಕೇವಲ 72,147 ಕೋಟಿ ರೂಪಾಯಿಗಳಾಗಿದ್ದು, ಉಳಿದ 43,515 ಕೋಟಿ ರೂಪಾಯಿಗಳನ್ನು ಕೇಂದ್ರವು ತನ್ನದೇ ಆದ ಸಂಪನ್ಮೂಲಗಳಿಂದ ಬಿಡುಗಡೆ ಮಾಡುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

ರಾಜ್ಯಗಳು ತಮ್ಮ ಸಂಪನ್ಮೂಲಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡಲು ಮತ್ತು ಹಣಕಾಸು ವರ್ಷದಲ್ಲಿ ತಮ್ಮ ಕಾರ್ಯಕ್ರಮಗಳನ್ನು ವಿಶೇಷವಾಗಿ ಬಂಡವಾಳದ ಮೇಲಿನ ವೆಚ್ಚವನ್ನು ಯಶಸ್ವಿಯಾಗಿ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹಣಕಾಸು ಸಚಿವಾಲಯ ಮಾಹಿತಿ ನೀಡಿದೆ.

... 1ನೇ ಪುಟದಿಂದ



ಸಾಲ ವಸೂಲಾತಿಯಲ್ಲಿ ಸಹ ಮುಂದೆ ಇದ್ದು ಬ್ಯಾಂಕ ನೀಡುವ ಸಾಲವನ್ನು ಸದ್ಬಳಕೆ ಮಾಡಿಕೊಂಡು ಅದನ್ನು ಮರಳಿಸುವ ಪ್ರಾಮಾಣಿಕ ಮನೋಭಾವ ಗ್ರಾಹಕರು ಅಳವಡಿಸಿಕೊಳ್ಳುವುದು ಅಗತ್ಯ ಎಂದು ಅಭಿಪ್ರಾಯಪಟ್ಟರು. ಮಾಜಿ ಸಚಿವೆ ಶ್ರೀಮತಿ ಉಮಾಶ್ರೀ ಮಾತನಾಡಿ ಮಹಿಳೆಯರು ಧೈರ್ಯದಿಂದ ಮನೆ ಬಿಟ್ಟು ಹೊರ ಬಂದು ತಮ್ಮ ಕನಸುಗಳನ್ನು ಈಡೇರಿಸಿಕೊಳ್ಳಬೇಕು. ಅದಕ್ಕೆ ಕುಟುಂಬ ಸಹ ಸಹಕಾರ ನೀಡಬೇಕು. ಮಹಿಳೆಯರಿಂದ ಆರಂಭಗೊಂಡ ಈ ಬ್ಯಾಂಕು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸಿದರಲ್ಲದೇ ಈ ಬ್ಯಾಂಕಿನ ಆಡಳಿತ ಮಂಡಳಿಯ ಸಹಾಯ ಸಹಕಾರ ಸ್ಮರಣೀಯ ಎಂದರು.

ದಿವ್ಯಸಾನಿಧ್ಯ ವಹಿಸಿದ್ದ ನಿರ್ಭಯಾನಂದ ಸರಸ್ವತಿ ಮಹಾಸ್ವಾಮೀಜಿಗಳು ಆಶೀರ್ವಚನ ನೀಡಿದರು.

ಮಾಜಿ ಶಾಸಕರಾದ ಡಿ.ಆರ್. ಪಾಟೀಲ ಮಾತನಾಡಿ ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕಿನ ಆರಂಭದ ಪರಿಸ್ಥಿತಿ ಹಾಗೂ ಅಂದು ಪರಿಶ್ರಮಪಟ್ಟ ಮಹನೀಯರ ಶ್ರಮ ಸಾರ್ಥಕವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕಿನ ಸಂಸ್ಥಾಪಕ ನಿರ್ದೇಶಕರಾದ ಶ್ರೀಮತಿ ಸುವರ್ಣಾ ಜಮಾದಾರ ಹಾಗೂ ಪ್ರೀತಿ ಝೋನಾ ಅವರನ್ನು ಸನ್ಮಾನಿಸಲಾಯಿತು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ವೀಣಾ ಪೋತ್ನೀಸ್ ಮಾತನಾಡಿ ಬ್ಯಾಂಕಿನ ಮ್ಯಾನೇಜರ್ ಬಸವಣ್ಣೆ ಹಂಡಿ ಹಾಗೂ ಸಿಬ್ಬಂದಿ ವರ್ಗದವರ ಸಹಕಾರ ಹಾಗೂ ಪರಿಶ್ರಮವನ್ನು ಸ್ಮರಿಸಿದರು. ಸಮಾರಂಭದಲ್ಲಿ ಮಾಜಿ ಶಾಸಕರಾದ ರಾಮಕೃಷ್ಣ ದೊಡ್ಡಮನಿ, ಬಿ.ಆರ್ ಯಾವಗಲ್, ಮಾಜಿ ನಗರಾಧ್ಯಕ್ಷ ಶ್ರೀನಿವಾಸ ಹುಯಿಲಗೋಳ, ಡಾ.ಆರ್.ಎನ್. ಗೋಡಬೋಲೆ, ಬ್ಯಾಂಕಿನ ಉಪಾಧ್ಯಕ್ಷ ಸುಷ್ಮಾ ಹುಲಕೋಟಿ, ರುದ್ರಮ್ಮ ಕೆರಕಲಮಟ್ಟಿ, ನೀಲಮ್ಮ ಬೋಳನವರ, ನಗರಸಭಾ ಸದಸ್ಯೆ ಶ್ರೀಮತಿ ಲಲಿತಾ ಅಸೂಟಿ, ಅವರಲ್ಲದೇ ಹಲವಾರು ಮಹಿಳಾ ಮುಖಂಡರು ಉಪಸ್ಥಿತರಿದ್ದರು. ನಿರ್ದೇಶಕರಾದ ಶ್ರೀಮತಿ ಸುಷ್ಮಾ ಹುಲಕೋಟಿ, ಶ್ರೀಮತಿ ಜಾನಕಿ ಎಸ್.ಮಲ್ಲಾಪೂರ, ಶ್ರೀಮತಿ ಶಶಿಕಲಾ ಪಿ. ಬರದ್ವಾಡ, ಶ್ರೀಮತಿ ವಿದ್ಯಾ ಆರ್. ಹಬೀಬ, ಶ್ರೀಮತಿ ನಂದಾ ಬಿ. ಹುಲಕೋಟಿ, ಶ್ರೀಮತಿ ವಿಜಯಾ ಡಿ. ದೇಶಪಾಂಡೆ, ಶ್ರೀಮತಿ ರಮಾ ಪಿ. ಅಡವಿ, ಶ್ರೀಮತಿ ಮೀನಾಕ್ಷಿ ಎಸ್. ಬೆನಕಣ್ಣವರ, ಶ್ರೀಮತಿ ಮೀನಾಕ್ಷಿ ಜಿ. ಮಲ್ಲಾಡದ, ಶ್ರೀಮತಿ ರೇಶ್ಮಾ ನಾಗರಕಟ್ಟಿ, ಶ್ರೀಮತಿ ರೇಶ್ಮಾ ಪಿ. ಬಸರಿಗಿಡದ ಮತ್ತಿತರರು ಉಪಸ್ಥಿತರಿದ್ದರು. ಶ್ರೀಮತಿ ವೀಣಾ ಎ. ಪೊತ್ನೀಸ್ ಸ್ವಾಗತಿಸಿದರು. ಕಾರ್ಯಕ್ರಮ ನಿರೂಪಿಸಿದ ಜೆ.ಕೆ. ಜಮಾದಾರ ವಂದಿಸಿದರು.

## ದಿನಾಂಕ: 10.12.2022 ಮತ್ತು 11.12.2022ರಂದು ಶಿರಸಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಅಧಿಕಾರಿಗಳಿಗೆ ರಾಜ್ಯ ಮಟ್ಟದ ಎರಡು ದಿನದ ವಿಚಾರ ಸಂಕಿರಣ

ಬೆಂಗಳೂರು:ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಅಧಿಕಾರಿ ವರ್ಗದವರಿಗೆ ದಿನಾಂಕ:10.12.2022ರಂದು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಎಮ್.ಇ.ಎಸ್. ಕಾಲೇಜ್ ಆಫ್ ಕಾಮರ್ಸ್, ಕಾಲೇಜ್ ರಸ್ತೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ ಇಲ್ಲಿ ಏರ್ಪಡಿಸಲಾಗಿದೆ. ಈ ವಿಚಾರ ಸಂಕಿರಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಕುರಿತು ಆರ್‌ಬಿಐನ ಇತ್ತೀಚಿನ ಸುತ್ತೋಲೆಗಳು, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ / ನಿಯಮದಲ್ಲಿನ ಪ್ರಮುಖ ನಿಬಂಧನೆಗಳು ಕುರಿತು ನುರಿತ ತಜ್ಞರುಗಳು ಉಪನ್ಯಾಸ ನೀಡಲಿದ್ದಾರೆ.

ಈ ವಿಚಾರ ಸಂಕಿರಣದಲ್ಲಿ ತಮ್ಮ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರುಗಳು ಮತ್ತು ಅಧಿಕಾರಿ ವರ್ಗದವರು ಭಾಗವಹಿಸಿ, ಈ ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ತಿಳಿಸಿರುತ್ತಾರೆ.

ದಿನಾಂಕ:11.12.2022ರಂದು ಶಿರಸಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ ಇವರು ಡಾ॥ ಅಂಬೇಡ್ಕರ್ ಭವನ, ಯಲ್ಲಾಪೂರ ರಸ್ತೆ, ಶಿರಸಿ – 581 402, ಇಲ್ಲಿ ಡಾ॥ ವಿ.ಎಸ್. ಸೋಂದೆಯವರ ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿರುತ್ತಾರೆ. ಈ ಸಮಾರಂಭದ ಮುಖ್ಯಅತಿಥಿಗಳಾಗಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು ಭಾಗವಹಿಸಲಿದ್ದಾರೆ. ಆರ್‌ಬಿಐನ ಕೇಂದ್ರ ಮಂಡಳಿಯ ನಿರ್ದೇಶಕರಾದ ಶ್ರೀ ಸತೀಶ್ ಕೆ. ಮರಾಠೆ ರವರು "Road ahead for Urban Co-operative Banks" ಕುರಿತು ಉಪನ್ಯಾಸ ನೀಡಲಿದ್ದಾರೆ. ಪ್ರಯುಕ್ತ, ಈ ಕಾರ್ಯಕ್ರಮದಲ್ಲಿ ತಾವೆಲ್ಲರೂ ತಪ್ಪದೇ ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್.ಕೇರೂರೆ ತಿಳಿಸಿರುತ್ತಾರೆ. ಈಗಾಗಲೇ ತಮ್ಮ ಬ್ಯಾಂಕಿನ ಇ–ಮೇಲ್ ವಿಳಾಸಕ್ಕೆ ವಿಚಾರ ಸಂಕಿರಣದ ಸುತ್ತೋಲೆಯನ್ನು ಕಳುಹಿಸಿಕೊಡಲಾಗಿದೆ.

# ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ಹಿರಿಯರಿಗೆ ಗೌರವ ಸಮರ್ಪಣೆ; ಗ್ರಾಹಕರ ವಿಶ್ವಾಸದಿಂದ ಸಹಕಾರ ಕ್ಷೇತ್ರ ಗಟ್ಟಿ



**ಬೆಂಗಳೂರು :** "ವಿಶ್ವಾಸವಿಲ್ಲದೆ ವ್ಯವಹಾರ ನಡೆಯುವುದಿಲ್ಲ. ಗ್ರಾಹಕರು ಮತ್ತು ಸದಸ್ಯರ ನಡುವಿನ ವಿಶ್ವಾಸದ ಮೇಲೆ ಸಹಕಾರ ಕ್ಷೇತ್ರ ಗಟ್ಟಿಯಾಗಿ ನಿಂತಿದೆ," ಎಂದು ಶಾಸಕ ರವಿಸುಬ್ರಹ್ಮಣ್ಯ ಹೇಳಿದರು.

69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ದಿನಾಂಕ:20.11.2022ರಂದು ಎನ್.ಆರ್. ಕಾಲೋನಿಯ ಅಶ್ವತ್ಥ್ ಕಲಾಭವನದಲ್ಲಿ ಆಯೋಜಿಸಲಾಗಿದ್ದ 'ವಿದ್ಯಾರ್ಥಿಗಳಿಗೆ ಅಂತರ ಕಾಲೇಜು ಪ್ರಬಂಧ ಸ್ಪರ್ಧೆ, ಬ್ಯಾಂಕ್‌ನ ಸದಸ್ಯರು ಹಾಗೂ ಗ್ರಾಹಕರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಮತ್ತು ಬ್ಯಾಂಕ್‌ನ ಹಿರಿಯ ಸದಸ್ಯರಿಗೆ ಗೌರವ ಸಮರ್ಪಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರವೆಂದರೆ ಪರಸ್ಪರ ನಂಬಿಕೆ ಎಂದರ್ಥ. ಒಂದೆರಡು ಸಹಕಾರ ಬ್ಯಾಂಕ್‌ಗಳು ವಂಚಿಸಿರುವುದು ನಿಜ. ಆದರೆ, ಎಲ್ಲಾ ಬ್ಯಾಂಕ್‌ಗಳನ್ನು ಅದೇ ದೃಷ್ಟಿಕೋನದಲ್ಲಿ ನೋಡಬಾರದು. ವಿಶ್ವಾಸವಿಟ್ಟು ವ್ಯವಹಾರ ಮಾಡಬೇಕು. ಇದಕ್ಕೆ ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಉದಾಹರಣೆಯಾಗಿದೆ," ಎಂದರು. ವಿಜಯಕರ್ನಾಟಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಮಾತನಾಡಿ "ಕೆಲವರು ಮಾಡಿದ ತಪ್ಪಿನಿಂದಾಗಿ ಸಹಕಾರ ಬ್ಯಾಂಕ್‌ಗಳ ಮೇಲೆ ಜನರು ವಿಶ್ವಾಸ ಕಳೆದುಕೊಳ್ಳುತ್ತಿರುವ ನಡುವೆಯೂ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಜನರ ವಿಶ್ವಾಸ ಗಳಿಸಿ ಮುನ್ನುಗ್ಗುತ್ತಿದೆ. ಈ ಬ್ಯಾಂಕ್ ಕೇವಲ ಹಣದ ವ್ಯವಹಾರವಷ್ಟೇ ಅಲ್ಲದೇ, ವಿದ್ಯಾರ್ಥಿಗಳಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜ್ಞಾನ ಬಿತ್ತಲು ಪ್ರಬಂಧ ಸ್ಪರ್ಧೆ ನಡೆಸುತ್ತಿದೆ. ಗ್ರಾಹಕರ ಆರೋಗ್ಯ ತಪಾಸಣೆ ಮಾಡಿಸುವ ಮೂಲಕ ಆರೋಗ್ಯಕರವಾಗಿ ಬೆಳೆಯುತ್ತಿದೆ," ಎಂದು ಶ್ಲಾಘಿಸಿದರು. ಗ್ರಾಹಕರ ವಿಶ್ವಾಸಕ್ಕೆ ಧಕ್ಕೆಯಾಗದ ರೀತಿ ಸಹಕಾರ ಬ್ಯಾಂಕ್‌ಗಳು ನಡೆದುಕೊಂಡು ಹೋದರೆ ಹೆಚ್ಚಿನ ಸಂಖ್ಯೆಯ ಗ್ರಾಹಕರು ವಹಿವಾಟು ನಡೆಸುತ್ತಾರೆ. ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್‌ಗೆ ಉತ್ತಮ ಹೆಸರಿದೆ. ನಗರದಲ್ಲಿರುವ 18 ಶಾಖೆಗಳು 28 ಶಾಖೆಗಳಾಗಿ ಬೆಳೆಯಬೇಕು. ಗ್ರಾಹಕರ ಸಂಖ್ಯೆ ಒಂದು ಲಕ್ಷ ಮೀರುವಂತೆ ಅಭಿವೃದ್ಧಿಯಾಗಬೇಕು," ಎಂದರು.

ಕಾರ್ಯಕ್ರಮದಲ್ಲಿ "ಸಹಕಾರ ರತ್ನ" ಪ್ರಶಸ್ತಿಗೆ ಭಾಜನರಾಗಿರುವ ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿ., ಅಧ್ಯಕ್ಷ ಎಂ.ಆರ್. ವೆಂಕಟೇಶ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಪ್ರಬಂಧ ಸ್ಪರ್ಧೆಯಲ್ಲಿ ಜಯನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕೌಶಲ್ಯಾ ಮೊದಲನೇ ಪ್ರಶಸ್ತಿ, ಬಸವನಗುಡಿಯ ನ್ಯಾಷನಲ್ ಕಾಲೇಜಿನ ಪಲ್ಲವಿ ದ್ವಿತೀಯ ಪ್ರಶಸ್ತಿ, ಆಚಾರ್ಯ ಪಾಠ ಶಾಲೆಯ ಮೇಘನಾ ಮೂರನೇ ಪ್ರಶಸ್ತಿ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ, ಪಾಲಿಕೆ ಮಾಜಿ ಸದಸ್ಯೆ ಶ್ಯಾಮಲಾ ಸಾಯಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ನಿರ್ದೇಶಕರುಗಳು



ಡಾ|| ಎಂ.ಆರ್. ವೆಂಕಟೇಶ್



ಶ್ರೀ ಬಿ.ವಿ. ದ್ವಾರಕನಾಥ್



ಶ್ರೀ ಕೆ.ಎಲ್. ತಿಮ್ಮಪ್ಪ



ಶ್ರೀ ಜೆ.ಎಂ. ಜಯಪ್ರಕಾಶ್

**ಬೆಂಗಳೂರು :** ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಡಾ|| ಎಂ.ಆರ್. ವೆಂಕಟೇಶ್, ಶ್ರೀ ಚರಣ್ ಕೋ-ಆಪರೇಟಿವ್ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ವಿ. ದ್ವಾರಕನಾಥ್, ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎಲ್.ತಿಮ್ಮಪ್ಪ, ಭಾರತ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಜೆ.ಎಂ. ಜಯಪ್ರಕಾಶ್ ರವರುಗಳಿಗೆ 2022ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು, ಉಪಾಧ್ಯಕ್ಷರಾದ ಬಿ.ಎಸ್. ಪರಮಶಿವಯ್ಯನವರು ಹಾಗೂ ಮಹಾಮಂಡಳದ ನಿರ್ದೇಶಕ ಮಂಡಳಿ ಸದಸ್ಯರು, ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿರುತ್ತಾರೆ.



## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು :** ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕಿನ 2021–22ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ. ರಮೇಶ್ ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧಿಕಾರಿ ಉಪಸ್ಥಿತರಿದ್ದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು:** ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕಿನ 2021–22ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಉಪ ಪ್ರಧಾನ ವ್ಯವಸ್ಥಾಪಕ ಎನ್. ರಾಜಶೇಖರ್ ಅವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧಿಕಾರಿ ಶ್ರೀ ಜಗದೀಶ್ ಟಿ.ಆರ್. ಉಪಸ್ಥಿತರಿದ್ದರು.



## "ಮರ್ಚಂಟ್ಸ ಲಿಬರಲ್ ಬ್ಯಾಂಕಿನಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ಹಾಗೂ ಜನ ಜಾಗೃತಿಗಾಗಿ ಬೈಕ್ ರ್‍ಯಾಲಿ"



ಗದಗ ಜಿಲ್ಲೆಯ ಪ್ರತಿಷ್ಠಿತ ಮರ್ಚಂಟ್ಸ ಲಿಬರಲ್ ಕೋ–ಆಪ್ ಬ್ಯಾಂಕ ಲಿ., ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಹಾಗೂ ಅತಿಥೇಯ ಸಹಕಾರ ಸಂಸ್ಥೆಗಳು ಇವರ ನೇತೃತ್ವದಲ್ಲಿ ದಿನಾಂಕ : 20.11.2022 ರಂದು 69ನೇ ಅಖಿಲ ಭಾರತ ಸಹಕಾರ ಸಪ್ತಾಹ–2022ರ ಅಂಗವಾಗಿ ನಮ್ಮ ಬ್ಯಾಂಕಿನ ಮುಖ್ಯ ಕಚೇರಿಯಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹನ ಟಿ. ಕೋಟಿಯವರು ವಹಿಸಿದ್ದರು.

ಸಹಕಾರ ಸಂಘಗಳ ನೋಂದಣಿಯಿಂದ ಹಿಡಿದು ಎಲ್ಲ ನಿಯಮಗಳು ಸರಳೀಕರಣಗೊಳ್ಳಬೇಕು. ಅಧಿಕಾರ ವಿಕೇಂದ್ರಿಕರಣ ಆದಾಗ ಮಾತ್ರ ಈ ಸಹಕಾರ ಕ್ಷೇತ್ರ ಹೆಚ್ಚು ಬಲಿಷ್ಠವಾಗಲು ಸಾಧ್ಯ ಎಂದು ಕೆ.ಎಂ.ಎಫ್. ನಿರ್ದೇಶಕ ಎಚ್.ಜಿ. ಹಿರೇಗೌಡ್ರ ಹೇಳಿದರು.

ಕ್ಷೀರ ಭಾಗ್ಯ ಯೋಜನೆ ಅನುಷ್ಠಾನದಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ ಎಂದು ತಿಳಿಸಿದರು. ಮುಖ್ಯ ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದ ಗಂಗಾವತಿಯ ಸಿ.ಬಿ.ಎಸ್. ಬ್ಯಾಂಕಿನ ಸಿ.ಇ.ಓ. ಚನ್ನಪ್ಪ ಜವಳಿ ಅವರು ಸಹಕಾರಿ ಬ್ಯಾಂಕುಗಳು ಕೂಡ ಆಧುನೀಕರಣಕ್ಕೆ ತಕ್ಕಂತೆ ಡಿಜಿಟಲೈಜೇಶನ್‌ಗೆ ಮುಂದಾಗಬೇಕು ಇದರಲ್ಲಿ ಎಚ್ಚರಿಕೆ ವಹಿಸಿ ಮಂಜಾಗ್ರತೆ ಇರಬೇಕು ಎಂದು ಸಲಹೆ ನೀಡಿದರು. ಬ್ಯಾಂಕಿನ ಅಧ್ಯಕ್ಷರಾದ ಮೋಹನ ಟಿ. ಕೋಟಿ ಇವರು ಮಾತನಾಡಿ ಹಿರಿಯರು ಕಟ್ಟಿದ ಸಹಕಾರ ಸಂಸ್ಥೆಯ ಫಲ ಇಂದಿನವರು ಉಣ್ಣುತ್ತಿದ್ದೇವೆ, ಸಂಸ್ಥೆಯ ಸಿಬ್ಬಂದಿ ಪ್ರಾಮಾಣಿಕ ಗ್ರಾಹಕರಿಂದ ಉನ್ನತ ಬೆಳವಣಿಗೆ ಸಾಧ್ಯ ಎಂದು ಹೇಳಿದರು.

ಬ್ಯಾಂಕಿನ ಸಂಸ್ಥಾಪಕ ಶೇರುದಾರ ಸದಸ್ಯರಾದ ವೀರುಪಾಕ್ಷಪ್ಪ ಫಕೀರಪ್ಪ ಮುಳಗುಂದ ಸಮಾರಂಭವನ್ನು ಜ್ಯೋತಿ ಬೆಳಗುವದರ ಮೂಲಕ ಉದ್ಘಾಟಿಸಿದರು. ಗದಗ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಸಿ.ಬಿ. ದೊಡ್ಡಗೌಡ್ರ, ಉಪಾಧ್ಯಕ್ಷರಾದ ಎಸ್.ಬಿ.ಬಾರಿಕಾಯಿ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಹಿರಿಯ ಲೆಕ್ಕ ಪರಿಶೋಧಕ ಎಮ್.ವ್ಹಿ. ಚುರ್ಚಿಹಾಳ, ಕಿರಣಕುಮಾರ ಹುಗ್ಗಿ ವೇದಿಕೆಯಲ್ಲಿದ್ದರು.

ಉಪಾಧ್ಯಕ್ಷರಾದ ಶರಣಬಸಪ್ಪ ಕೆ. ಕುರಡಗಿ ಹಾಗೂ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಪ್ರಧಾನ ವ್ಯವಸ್ಥಾಪಕರಾದ ರಾಜು ಎಲ್. ಕೋಟಿ, ಮುಖ್ಯ ಕಚೇರಿ ಹಾಗೂ ಶಾಖೆಗಳ ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಸಂಗ್ರಹಕಾರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಉಪಾಧ್ಯಕ್ಷರಾದ ಶರಣಬಸಪ್ಪ ಕುರಡಗಿ ವಂದಿಸಿದರು. ಗದಗ ಜಿಲ್ಲಾ ಸಹಕಾರ ಯೂನಿಯನ್ ಸಿ.ಇ.ಓ. ಚಂದ್ರಶೇಖರ ಕರಯಪ್ಪನವರ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಸಹಕಾರ ಕ್ಷೇತ್ರದ ಕುರಿತು ಜನಜಾಗೃತಿ ಮೂಡಿಸಲು ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಬೈಕ ರ್‍ಯಾಲಿ ಮೂಲಕ ಜಾಥಾವನ್ನು ಏರ್ಪಡಿಸಲಾಗಿತ್ತು.

## ಭಾರತದ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಶೇ.7.7 ರಿಂದ ಶೇ.7ಕ್ಕೆ ಇಳಿಸಿದ ಮೂಡೀಸ್




**ಹೊಸದಿಲ್ಲಿ :** ಭಾರತದಲ್ಲಿ ಆರ್ಥಿಕ ಬೆಳವಣಿಗೆಯು ತ್ವರಿತವಾಗಿ ಚೇತರಿಸಿಕೊಳ್ಳಲಿದೆ ಎಂದಿದ್ದ ಮೂಡೀಸ್ ಇನ್ವೆಸ್ಟರ್ಸ್ ಸರ್ವೀಸ್, ಈಗ ದೇಶದ 2022ರ ಜಿಡಿಪಿ ಅಂದಾಜನ್ನು ಕಡಿತ ಮಾಡಿದೆ. ಜಿಡಿಪಿ ಬೆಳವಣಿಗೆಯ ಅಂದಾಜನ್ನು ಶೇ.7.7 ರಿಂದ ಶೇ.7ಕ್ಕೆ ಇಳಿಸಿದೆ. ಜಾಗತಿಕ ಮಟ್ಟದ ನಿಧಾನಗತಿಯ ಆರ್ಥಿಕತೆ, ದೇಶೀಯ ಬಡ್ಡಿ ದರದಲ್ಲಿ ಹೆಚ್ಚಳ ಮೊದಲಾದ ಅಂಶಗಳು ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರಲಿದೆ ಎಂದು ವರದಿ ತಿಳಿಸಿದೆ.

ಮೂಡೀಸ್ ಸಂಸ್ಥೆಯು ಭಾರತದ ಆರ್ಥಿಕ ಬೆಳವಣಿಗೆ ದರದ ಅಂದಾಜಿನಲ್ಲಿ ಕಡಿತ ಮಾಡಿರುವುದು ಇದು ಎರಡನೇ ಬಾರಿ. "2022 ಮತ್ತು 2023ನೇ ಆರ್ಥಿಕ ವರ್ಷದಲ್ಲಿ ಕ್ರಮವಾಗಿ ಶೇ.9.3 ಮತ್ತು ಶೇ.7.9ರಷ್ಟು ಜಿಡಿಪಿ ಬೆಳವಣಿಗೆಯಾಗಲಿದೆ," ಎಂದು ಈ ಹಿಂದೆ ಮೂಡೀಸ್ಅಂದಾಜಿಸಿತ್ತು. ಕಳೆದ ಸೆಪ್ಟೆಂಬರ್‌ನಲ್ಲಿ ಜಿಡಿಪಿ ಬೆಳವಣಿಗೆ ಅಂದಾಜನ್ನು ಶೇ.8.8 ರಿಂದ 7.7ಕ್ಕೆ ಕಡಿತ ಮಾಡಿತ್ತು. ಈಗ ಮತ್ತೆ ಜಿಡಿಪಿ ಬೆಳವಣಿಗೆ ಅಂದಾಜಿನಲ್ಲಿ ಕಡಿತ ಮಾಡಿದೆ.

ಹೆಚ್ಚಿದ ಹಣದುಬ್ಬರ, ಅತಿಯಾದ ಬಡ್ಡಿ ದರ ಹಾಗೂ ಜಾಗತಿಕ ಆರ್ಥಿಕ ಬೆಳವಣಿಗೆ ದರ ಕುಠಿತವಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಭಾರತದ ಜಿಡಿಪಿ ಬೆಳವಣಿಗೆ ದರವನ್ನು ಅಂದಾಜಿಸಿದ್ದೇವೆ. ಈ ಎಲ್ಲ ಬೆಳವಣಿಗೆಗಳಿಂದಾಗಿ ನಾವು ಈ ಹಿಂದೆ ಅಂದಾಜಿಸಿದಷ್ಟು ಜಿಡಿಪಿ ಬೆಳವಣಿಗೆ ಹೊಂದುವುದು ಸಾಧ್ಯವಿಲ್ಲ, ಎಂಬ ಅಭಿಪ್ರಾಯಕ್ಕೆ ಬರಲಾಗಿದೆ ಎಂದು ವರದಿಯಲ್ಲಿ ಮೂಡೀಸ್ ತಿಳಿಸಿದೆ. 2023ರಲ್ಲಿ ಶೇ.4.8 ಮತ್ತು 2024ರಲ್ಲಿ ಶೇ.6.4ರ ಆರ್ಥಿಕ ಬೆಳವಣಿಗೆಯನ್ನು ಅಂದಾಜಿಸಲಾಗಿದೆ ಎಂದು ಮೂಡೀಸ್ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

**ಇನ್ನೆರಡು ವರ್ಷ ಸಂಕಷ್ಟ! :** ಜಾಗತಿಕ ಆರ್ಥಿಕತೆಯು ಕುಸಿತದ ಅಂಚಿನಲ್ಲಿದೆ. ಅನಿಶ್ಚಿತತೆ ಉನ್ನತ ಮಟ್ಟದಲ್ಲಿದೆ. ಹಣದುಬ್ಬರ ಏರಿಕೆ, ಹಣಕಾಸು ನೀತಿಗಳಲ್ಲಿ ಬಿಗಿ ಹಿಡಿತ, ವಿತ್ತೀಯ ಸವಾಲುಗಳು, ರಾಜಕೀಯ ಬದಲಾವಣೆಗಳು ಮತ್ತು ಹಣಕಾಸು ಮಾರುಕಟ್ಟೆಯ ಚಂಚಲತೆ ಆರ್ಥಿಕ ಬೆಳವಣಿಗೆ ಮೇಲೆ ಪ್ರಭಾವ ಬೀರುತ್ತಿದೆ ಎಂದು ವರದಿ ಹೇಳಿದೆ. 2023 ಹಾಗೂ 2024ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ನಿಧಾನಗತಿಯಲ್ಲಿ ಸಾಗಲಿದೆ. ಪ್ರಮುಖ ದೇಶಗಳ ಸರಕಾರಗಳು ಮತ್ತು ಕೇಂದ್ರೀಯ ಬ್ಯಾಂಕ್‌ಗಳು ಸರಿಯಾದ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದರೆ 2024ರಿಂದ ಆರ್ಥಿಕತೆಯು ಸ್ಥಿರವಾಗುತ್ತಾ ಸಾಗಬಹುದು ಎಂದು ಮೂಡೀಸ್ ಹೇಳಿದೆ.

## ದೇಶದಲ್ಲಿ ನಗದು ಹರಿವಿನ ಪ್ರಮಾಣ ಭಾರೀ ಹೆಚ್ಚಳ



**ನವದೆಹಲಿ :** ನೋಟು ರದ್ದಾಗಿ ಆರು ವರ್ಷ ಕಳೆದರೂ ಹಾಗೂ ಆನ್‌ಲೈನ್ ಪಾವತಿ ಹೆಚ್ಚಾದರೂ ಕೂಡ ಜನರ ನಡುವೆ ನಗದು ಹರಿವಿನ ಪ್ರಮಾಣ ಹೆಚ್ಚಳವಾಗಿದೆ. ಅಕ್ಟೋಬರ್21ರ ವೇಳೆಗೆ ಬರೋಬ್ಬರಿ ರೂ.30.88 ಲಕ್ಷ ಕೋಟಿ ಜನರ ನಡುವೆ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿದ ಪಾಕ್ಷಿಕ ಹಣ ವಿತರಣೆ ಮಾಹಿತಿಯಿಂದ ಗೊತ್ತಾಗಿದೆ.

ಆರ್‌ಬಿಐ ವರದಿ ಪ್ರಕಾರ ರೂ.30.88 ಲಕ್ಷ ಕೋಟಿ ಅಂದರೆ ಒಟ್ಟು ನಗದಿನ ಶೇ 71.84 ರಷ್ಟು ಹಣ ಜನರ ಮಧ್ಯೆಯೇ ಇದೆ. ಇದು 2016 ನವೆಂಬರ್4ಕ್ಕೆ ಅಂತ್ಯವಾದ ತ್ರೈಮಾಸಿಕದಲ್ಲಿ ಇದ್ದಿದ್ದಕ್ಕಿಂತ ಅಧಿಕ. ಆ ವೇಳೆಯಲ್ಲಿ ಜನರ ಮಧ್ಯೆ ರೂ.17.7 ಲಕ್ಷ ಕೋಟಿ ಹರಿದಾಡುತ್ತಿತ್ತು.

ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಹಾಗೂ ನಗದು ರಹಿತ ಆರ್ಥಿಕತೆ ಸೃಷ್ಟಿ ಮಾಡುವ ಸಲುವಾಗಿ 2016 ನವೆಂಬರ್8 ರಂದು ನರೇಂದ್ರಮೋದಿ ನೇತೃತ್ವದ ಕೇಂದ್ರ ಸರ್ಕಾರವು, ರೂ.500 ಹಾಗೂ ರೂ. 1000 ಮುಖಬೆಲೆಯ ನೋಟುಗಳನ್ನು ರದ್ದು ಮಾಡಿತ್ತು. ಆದರೂ ಈಗ ಭಾರೀ ಪ್ರಮಾಣದಲ್ಲಿ ನಗದು ಹರಿದಾಡುತ್ತಿದೆ. ಸರಿಯಾದ ಮುಂದಾಲೋಚನೆ ಇಲ್ಲದೆ ತೆಗೆದುಕೊಂಡ ನಿರ್ಧಾರ ಎಂದು ನೋಟು ರದ್ದು ಮಾಡಿದ್ದ ಕ್ರಮದ ವಿರುದ್ಧ ಟೀಕೆಗಳು ಕೇಳಿ ಬಂದಿದ್ದವು.

# ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕಿನ 59ನೇ ಸ್ಥಾಪಕರ ದಿನಾಚರಣೆ





**ಶಿವಮೊಗ್ಗ :** ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಶಿವಮೊಗ್ಗ ಇದರ 59ನೇ ಸ್ಥಾಪಕರ ದಿನ ಆಚರಣೆಯನ್ನು ದಿನಾಂಕ : 24-11-2022ರಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ವತಿಯಿಂದ ಸ್ಥಾಪಕ ಮಂಡಲಿಯ ಸದಸ್ಯರಾದ ಶ್ರೀ ಭೂಪಾಳಂ.ಎಸ್.ಸತ್ಯನಾರಾಯಣ ಇವರನ್ನು ಸನ್ಮಾನಿಸಲಾಯಿತು. ಸ್ಥಾಪಕ ದಿನದ ಅರ್ಥಪೂರ್ಣ ಆಚರಣೆ ನಿಟ್ಟಿನಲ್ಲಿ, ಸದಸ್ಯರು / ಗ್ರಾಹಕರಿಗೆ ರೋಟರಿ ಬ್ಲಡ್ ಸೆಂಟರ್ ಸಹಯೋಗದೊಂದಿಗೆ ರಕ್ತ ದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಜೊತೆಯಲ್ಲಿ ಉಚಿತವಾಗಿ ಕಣ್ಣು ಮತ್ತು ಕಿವಿ ತಪಾಸಣಾ ಶಿಬಿರವನ್ನು ಸಹ ಆಯೋಜಿಸಲಾಗಿತ್ತೆಂದು ಬ್ಯಾಂಕಿನ ವ್ಯವಸ್ಥಾಪಕರಾದ ಬಿ.ಆರ್.ಚಂದ್ರಮೌಳಿ ತಿಳಿಸಿದ್ದಾರೆ.



## ಭಾವಪೂರ್ಣ ಶ್ರದ್ಧಾಂಜಲಿ

**ಬೆಂಗಳೂರು :** ಹಿರಿಯ ಸಹಕಾರಿಗಳು, ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರು, ಹೈದರಾಬಾದನ ಭಾವನಾ ರಿಷಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರು, ಆಂಧ್ರ ಪ್ರದೇಶ ಮತ್ತು ತೆಲಂಗಾಣ ಟ್ಯಾಫ ಕಬ್‌ನ ಸದಸ್ಯರಾಗಿದ್ದ ಶ್ರೀ ಜಿ. ರಾಮಮೂರ್ತಿ ರವರು ದಿನಾಂಕ : 21.11.2022ರಂದು ನಿಧನರಾದರು. ಇವರ ನಿಧನಕ್ಕೆ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಬ್ಯಾಂಕು ವಾಹನಗಳನ್ನು ಖರೀದಿಸಲು ಸಾಲಗಳನ್ನು ನೀಡುತ್ತಿದ್ದು, ಸಾಲದ ಭದ್ರತೆಗಾಗಿ ವಿಮೆಯನ್ನು ಪಡೆಯುತ್ತಿದ್ದೇವೆ. ವಿಮಾ ಪಾಲಿಸಿಗಳನ್ನು ಜೀವಂತವಾಗಿಡಲು, ಸಾಲಗಾರ ಪ್ರೀಮಿಯಂ ಕಟ್ಟದಿದ್ದರೂ, ಬ್ಯಾಂಕು ವಿಮಾ ಪ್ರೀಮಿಯಂ ಕಟ್ಟುತ್ತಿದೆ. ಇತ್ತೀಚೆಗೆ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಒಂದು ಸುತ್ತೋಲೆಯನ್ನು ಹೊರಡಿಸಿ ನವೀಕರಿಸಿದ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಮಾಣಪತ್ರವಿಲ್ಲದಿದ್ದಲ್ಲಿ ವಾಹನದ ವಿಮಾ ಮೊತ್ತವನ್ನು ನೀಡಬಾರದು ಎಂದು ಹೇಳಿದೆ. ಈ ಹೊಸ ಮಾರ್ಗಸೂಚಿಯಿಂದಾಗಿ ವಿಮಾ ಪಾಲಿಸಿ ಜೀವಂತವಾಗಿದ್ದರೂ, ಸಾಲಗಾರ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ನವೀಕರಿಸದಿದ್ದಲ್ಲಿ ಬ್ಯಾಂಕಿಗೆ ವಿಮಾ ಮೊತ್ತ ದೊರೆಯುವುದಿಲ್ಲ. ಈ ಪರಿಸ್ಥಿತಿಯಲ್ಲಿ ಬ್ಯಾಂಕು ತನ್ನ ಹಿತಾಸಕ್ತಿಯನ್ನು ಹೇಗೆ ಕಾಪಾಡಿಕೊಳ್ಳಬಹುದು.**

**– ಹೊನ್ನಾವರ ಪಟ್ಟಣ ಸಹಕಾರ ಬ್ಯಾಂಕ್ ಲಿ., ಹೊನ್ನಾವರ.**

**ಉತ್ತರ :** ಡೆಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶದ ವಾಹನ ಮಾಲೀಕರು ತಮ್ಮ ವಾಹನದ ವಿಮಾ ಪಾಲಿಸಿಯ ನವೀಕರಣದ ವೇಳೆ ಮಾಲಿನ್ಯ ನಿಯಂತ್ರಣದಲ್ಲಿರುವ ಬಗ್ಗೆ ಪ್ರಮಾಣಪತ್ರ ವನ್ನು ಸಲ್ಲಿಸುವುದು ಕಡ್ಡಾಯವೆಂದು ಮಾನ್ಯ ಸರ್ವೋಚ್ಚನ್ಯಾಯಾಲಯ ದಿನಾಂಕ ಆಗಸ್ಟ್ 10, 2017ರಂದು ಆದೇಶ ನೀಡಿದೆ. ನಮಗೆ ತಿಳಿದಿರುವಂತೆ, ಈ ಆದೇಶದ ನಂತರ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಒಂದು (IRDAI) ಸುತ್ತೋಲೆಯನ್ನು ಹೊರಡಿಸಿ ಪಾಲಿಸಿ ನವೀಕರಣದ ವೇಳೆ ಮಾಲಿನ್ಯ ನಿಯಂತ್ರಣದ ಪ್ರಮಾಣಪತ್ರವನ್ನು ಪಡೆಯುವಂತೆ ವಿಮಾ ಸಂಸ್ಥೆಗಳಿಗೆ ಆದೇಶ ನೀಡಿದೆ. "ಕ್ಲೇಮ್‌ಗಳ ಇತ್ಯರ್ಥಕ್ಕೆ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ ಕಡ್ಡಾಯ" ಎಂದು ತಪ್ಪು ಮಾಹಿತಿಗಳು ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿವೆ. ನಮ್ಮ ಅಭಿಪ್ರಾಯದಲ್ಲಿ ವಿಮಾ ಕ್ಲೈಮ್ ಇತ್ಯರ್ಥ ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರದ ಸ್ಥಿತಿಯನ್ನು ಅವಲಂಬಿಸಿರುವುದಿಲ್ಲ ಮತ್ತು ಮಾನ್ಯವಾದ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರದ ಅನುಪಸ್ಥಿತಿಯು ಮೋಟಾರು ವಿಮಾ ಪಾಲಿಸಿಯ ಅಡಿಯಲ್ಲಿ ಕ್ಲೈಮ್ ಅನ್ನು ನಿರಾಕರಿಸಲು ಮಾನ್ಯವಾದ ಕಾರಣವಲ್ಲ.

# ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ (ISRO) ಪಿಎಸ್‌ಎಲ್‌ವಿ–ಸಿ 54 Oceansat-3 ಎಂದೂ ಕರೆಯಲ್ಪಡುವ EOS-06 ಮತ್ತು 8 ನ್ಯಾನೊ ಉಪಗ್ರಹಗಳನ್ನು ಹೊತ್ತ ರಾಕೆಟ್ ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆಗೊಂಡಿತು.
- ಬೆಲ್ಜಿಯಂ ದೇಶದ ಕೆಮಿಲ್ ಎನ್ನುವ ಚೆಲುವೆಯೊಬ್ಬಳು ಹಂಪಿಯ ಅನಂತರಾಜು ಎನ್ನುವ ಆಟೋ ಚಾಲಕನ ಪ್ರಾಮಾಣಿಕತೆಗೆ ಮನಸೋತು, ಹಂಪಿಯ ವಿರೂಪಾಕ್ಷೇಶ್ವರನ ಸನ್ನಿಧಿಯಲ್ಲಿ ಅದ್ದೂರಿ ವಿವಾಹ ಮಾಡಿಕೊಂಡರು.
- ನ್ಯಾಯಾಂಗವು ಜನರನ್ನು ತಲುಪುವುದು ಅತ್ಯಗತ್ಯವಾಗಿದ್ದು, ಜನರೇ ನ್ಯಾಯಾಂಗವನ್ನು ತಲುಪುತ್ತಾರೆ ಎಂದು ನಿರೀಕ್ಷಿಸಬೇಡಿ ಎಂದು ಸಂವಿಧಾನ ದಿನದಂದು ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.
- ಖ್ಯಾತ ಇ–ಕಾಮರ್ಸ್ ವೇದಿಕೆ ಅಮೇಜಾನ್ ಸಂಸ್ಥೆ, ಭಾರತದಲ್ಲಿ ತನ್ನ ಆಹಾರ ವಿತರಣಾ ಸೇವೆಯನ್ನು ಸ್ಥಗಿತಗೊಳಿಸಿದೆ.
- ಭಾರತದ ಪ್ರಥಮ ಖಾಸಗಿ ನಿರ್ಮಾಣದ ಉಡಾವಣಾ ವಾಹನ, ವಿಕ್ರಮ್–ಎಸ್ ತನ್ನ ಮೊದಲ ಹಾರಾಟವನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ), ಆಂಧ್ರ ಪ್ರದೇಶದ ಶ್ರೀಹರಿಕೋಟಾದ ಲಾಂಚ್ ಪ್ಯಾಡ್‌ನಿಂದ ಪ್ರಥಮ ರಾಕೆಟ್ ಆಗಿದ್ದು, ಇದರಲ್ಲಿ ಮೂರು ಘನ ಇಂಧನ ಹಂತಗಳಿವೆ.
- ಒಡಿಶಾ ರಾಜ್ಯದ ಕೊರಾಪುಟ್ನ ಫಂಟ್ರಗುಡದ ಬಡ ಬುಡಕಟ್ಟು ನಿವಾಸಿಗಳು ಪರ್ವತ ಮನುಷ್ಯ ದಶರತ್ ಮಾಂಝಿ ಅವರಂತೆ ತಮ್ಮ ಹಳ್ಳಿಗೆ ಕಡಿದಾದ ಬೆಟ್ಟವನ್ನು ಕಡಿದು ತಾವೇ ರಸ್ತೆ ನಿರ್ಮಿಸಿಕೊಂಡಿದ್ದಾರೆ.
- ಭಾರತೀಯ ವನ್ಯಜೀವಿ ತಜ್ಞೆ ಡಾ. ಪೂರ್ಣಿಮಾ ದೇವಿ ಬರ್ಮನ್ ಅವರಿಗೆ ವಿಶ್ವಸಂಸ್ಥೆಯ ಅತ್ಯುನ್ನತ ಪರಿಸರ ಪ್ರಶಸ್ತಿಯಾದ ಚಾಂಪಿಯನ್ಸ್ ಆಫ್ ದಿ ಅರ್ಥ ನೀಡಿ ಗೌರವಿಸಲಾಗಿದೆ.
- ಕೋಮು ಸೌಹಾರ್ದತೆಗೆ ಮತ್ತೊಂದು ಉದಾಹರಣೆ ಎಂಬಂತೆ ಕೇರಳದ ಕಣ್ಣೂರಿನ ತೆರ್ಲಾಯಿ ದ್ವೀಪದಲ್ಲಿ ಸುಮಾರು 600 ವರ್ಷಗಳಷ್ಟು ಹಳೆಯದಾದ ಶಿವನ ದೇವಾಲಯದ ಜೀರ್ಣೋದ್ಧಾರಕ್ಕೆ ಚೆಂಗಲಾಯಿ ಮುಸ್ಲಿಂ ಸಮುದಾಯ ಟೊಂಕ ಕಟ್ಟಿ ನಿಂತಿದೆ.

## ಓದುಗರ ಅನಿಸಿಕೆ...




**ಹೆಮ್ಮೆಯ ಸಂಗತಿ :** ನಮ್ಮ ಊರಿನ ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕ್ 25 ವರ್ಷಗಳನ್ನು ಪೂರೈಸಿ ರಜತ ಮಹೋತ್ಸವ ಆಚರಿಸಿಕೊಳ್ಳುತ್ತಿರುವುದು ನಮಗೆಲ್ಲಾ ಹೆಮ್ಮೆಯ ಸಂಗತಿಯಾಗಿದೆ. ಇದು ಮಹಿಳೆಯರು ಒಗ್ಗಟ್ಟಾಗಿ ನಿರಂತರವಾದ ಪರಿಶ್ರಮದಿಂದ ಕಾರ್ಯನಿರ್ವಹಿಸಿದರೆ ಯಾವುದೇ ಸಂಸ್ಥೆ ಅಭಿವೃದ್ಧಿ ಸಾಧಿಸಲು ಸಾಧ್ಯ ಎನ್ನುವುದನ್ನು ತೋರಿಸಿಕೊಟ್ಟಿದೆ, ಬ್ಯಾಂಕಿನ ಆಡಳಿತ ಮಂಡಳಿ, ಸಿಬ್ಬಂಧಿ ವರ್ಗಕ್ಕೆ ಧನ್ಯವಾದಗಳು.

**ಆಶಾ ಪಾಟೀಲ್, ಗದಗ್**

**ನೆರವು ನೀಡುವಲ್ಲಿ ಮುಂಚೂಣಿಯಲ್ಲಿವೆ :** ನಮ್ಮ ದೇಶದ ಆರ್ಥಿಕ ನೀತಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮಹತ್ವವಾದದ್ದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನೇಕ ಜನಪರ ಕಾರ್ಯ ಯೋಜನೆಯನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಸಹಕಾರ ಸಂಘ–ಸಂಸ್ಥೆಗಳು ಯಶಸ್ವಿಯಾಗಿ ಕೈ ಜೋಡಿಸಿವೆ. ನಮ್ಮ ಸಹಕಾರ ಬ್ಯಾಂಕುಗಳು ಕೃಷಿಗೆ ಅಗತ್ಯ ಆರ್ಥಿಕ ನೆರವು ನೀಡುವಲ್ಲಿ ಮುಂಚೂಣಿಯಲ್ಲಿವೆ.

**ಎಸ್. ಜನಾರ್ಧನ ಆಚಾರ್, ಶಿವಮೊಗ್ಗ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.